ತ್ತವೆ. ಇದು ಸಣ್ಣ ಲೋಕಲ್ ಮ್ಯಾಟರ್ ಆದ್ದರಿಂದ ನಿಲುವಳಿಸೂಚನೆಗೆ ಸಂಬಂಧಪಟ್ಟ ವಿಷಯ ಆಗುವುದಿಲ್ಲ. ಆದ್ದರಿಂದ ನನ್ನ ಅನುಮತಿಯನ್ನು ಕೊಡಲಿಕ್ಕೆ ಆಗುವುದಿಲ್ಲ.

Leakage of S.S.L.C. Examination Question Papers

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಏಪ್ರಿಲ್ ಒಂದರಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆ ನಡೆಯುತ್ತಾ ಇದೆ; ನಾಳೆ ಜನರಲ್ ಸೈನ್ಸ್ ನಡೆಯಬೇಕಾಗಿದೆ. ಅದರ ಪ್ರಶ್ನೆಪತ್ರಿಕೆ ನನ್ನ ಕೈಯಲ್ಲಿ ಇದೆ; ಅದನ್ನು ಒಬ್ಬರು ನನ್ನ ಹತ್ತಿರ ಕಳುಹಿಸಿದ್ದಾರೆ. ನಾಳೆ ಆಗತಕ್ಕ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಮಾರಾಟವಾಗುತ್ತಾ ಇವೆ. ಈ ರೀತಿ ಆಗುವುದರಿಂದ ಕೆಲವರಿಗೆ ಹೆಚ್ಚಿನ ನಂಬರುಗಳು ಬಂದು ಅವರು ಉತ್ತೀರ್ಣರಾಗುತ್ತಾರೆ. ಸೈನ್ಸ್ ಪತ್ರಿಕೆ ಲೀಕ್ ಔಟ್ ಆಗಿದೆ, ಇದನ್ನು ಕಂಡುಹಿಡಿಯಬೇಕೆಂದು ಒಬ್ಬರು ನನಗೆ ನಾಳೆ ನಡೆಯತಕ್ಕ ಪ್ರಶ್ನೆಪತ್ರಿಕೆಯನ್ನು ಕಳುಹಿಸಿದ್ದಾರೆ. ಇದನ್ನು ನಾನು ತಮಗೆ ಕಳುಹಿಸುತ್ತೇನೆ. ತಾವು ಅಧ್ಯಕ್ಷರು ಇದನ್ನು ವಿದ್ಯಾಸಚಿವರ ಕಡೆಗೆ ಕಳುಹಿಸಿ ವಿಚಾರಣೆ ಮಾಡಿಸಬಹುದು. ಇದು ಒಂದು ದೊಡ್ಡ ರ್ಯಾಕೆಟ್ಟಿನೋಪಾದಿಯಲ್ಲಿ ನಡೆಯುತ್ತಿದೆ. ಹೀಗಾದರೆ ಇನ್ನು ಈ ಪರೀಕ್ಷೆಗಳಿಗೆ ಒಂದು ಪವಿತ್ರತೆ ಎಲ್ಲಿದೆ? ಹಿಂದೆ ಒಂದಾವರ್ತಿ ಹೀಗೇ ಆಗಿತ್ತು. ಈ ದಿವಸ ಈ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು ಮಾರುಕಟ್ಟೆಗೆ ಮಾರಾಟಕ್ಕೆ ಬಂದಿವೆ. ಇದನ್ನು ನೋಡಿದರೆ ಸರ್ಕಾರ ತನ್ನ ಕರ್ತವ್ಯ ಪಾಲನೆಯಲ್ಲಿ ವಿಫಲಗೊಂಡಿದೆ ಎಂಬುದು ದೃಢಪಡುತ್ತದೆ. ಈ ವಿಚಾರದಲ್ಲಿ ಅಧ್ಯಕ್ಷರು ಸಂಬಂಧಪಟ್ಟ ಮಂತ್ರಿಗಳಿಂದ ಈ ಸಭೆಗೆ ಕೂಡಲೇ ಒಂದು ಹೇಳಿಕೆಯನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

MR. SPEAKER.—I have understood the importance of the point raised by hon. Leader of Opposition.

ಶ್ರೀ ಬಿ. ಪಿ. ಗಂಗಾಧರ್.—ಅಧ್ಯಕ್ಷರೇ, ತಾವು ಸ್ವಲ್ಪ ರೆಸ್ಯೂಂ ಮಾಡಿದರೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ...

ಅಧ್ಯಕ್ಷರು.—ಮಾನ್ಯ ಸದಸ್ಯರು ಏನೂ ಹೇಳುವುದು ಬೇಡ. ವಿದ್ಯಾ ಉಪಮಂತ್ರಿಗಳು ಏನಾದರೂ ಈ ವಿಷಯದಲ್ಲಿ ಹೇಳುವುದಿದ್ದರೆ ಹೇಳಬಹುದು.

ಶ್ರೀ ಬಿ. ಪಿ. ಗಂಗಾಧರ್.—ಸುಮ್ಮನೆ ಆ ವಿದ್ಯಾ ಉಪಮಂತ್ರಿಗಳನ್ನು ಏಕೆ ಕೇಳುತ್ತೀರೊ? I want to submit to the Chair that the Deputy Minister has not been delegated any powers. Therefore the Chair should ask the Hon. Minister Sri Shankara Gowda, to resign.

(Several members stood up and began to speak simultaneously)

MR. SPEAKER.—I request all hon. Members to ressume their seats.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಮಂತ್ರಿಗಳು ಹೀಗೆ ಮಾತನಾಡುವುದು ಗೌರವವಲ್ಲ. ಅಂತಹ ಮಂತ್ರಿಗಳು ಈ ಸಭೆಯಲ್ಲಿ ಇರಬಾರದು. ಈ ಕಡೆಯ ಸದಸ್ಯರೊಬ್ಬರನ್ನು ಹೋಗೋ, ಬಾರೋ ಎಂದು ಕೇಳುತ್ತಿದ್ದಾರೆ. ಈ ಕಡೆಯವರೇನಾದರೂ ಅವರನ್ನು ಹೋಗೋ ಬಾರೋ ಎಂದು ಹೇಳಿದ್ದರೆ. ಅದು ತಪ್ಪು. ಅಂತಹವರು ಯಾವ ಪಕ್ಷದವರೇ ಆಗಿರಲಿ. ತಾವು ಅವರನ್ನು ಹೊರಗಡೆಗೆ ಕಳುಹಿಸಬಹುದು. ಯಾವಾಗಲೂ ಮಂತ್ರಿಗಳು ಸಾವಧಾನದಿಂದ ಇರಬೇಕು. ಒಂದುವೇಳೆ ಈ ಕಡೆಯ ಸದಸ್ಯರು ಹೆಚ್ಚು ಕಡಿಮೆ ಮಾತನಾಡಿದರೆ, ಮಂತ್ರಿಗಳಾಗಿರುವವರು ತಡೆದುಕೊಳ್ಳಬೇಕು. ಇಲ್ಲದಿದ್ದರೆ ಮಂತ್ರಿಗಳಾಗಬಾರದು. ಕಾಲಕ್ಕೆ ತಕ್ಕಂತೆ ಮಂತ್ರಿಯಾದವರು ಸಮಾಧಾನವಾಗಿರಬೇಕು. ಈ ಕಡೆಯವರು ಮಾತನಾಡಿದ್ದೂ ತಪ್ಪು. ಆ ರೀತಿ ಅವರು ಮಾತನಾಡಕೂಡದು. ಒಂದುವೇಳೆ ಆ ರೀತಿ ಮಾತನಾಡಿದ್ದರೆ, ಮಂತ್ರಿಗಳಾದವರು ಸಾವಧಾನ

(ಶ್ರೀ ಎಸ್. ಚನ್ನಯ್ಯ)

ವಾಗಿ ಸಮಾಧಾನವಾಗಬೇಕು. ಆಗ ಮಾತ್ರ ಮಂತ್ರಿಗಳಾದವರು ಮಂತ್ರಿ ಪದವಿಯಲ್ಲಿರುವುದಕ್ಕೆ ಲಾಯಕ್ಕು. ಈ ಸಭೆಯಲ್ಲಿ ಈ ರೀತಿ ಅವರು ಮಾಡಬಾರದು. ನಾನು ಈ ಸಭೆಯಲ್ಲಿ 40-50 ವರ್ಷಗಳಿಂದಲೂ ನೋಡುತ್ತಿದ್ದೇನೆ. ಈ ರೀತಿ ಆಗಲಿಲ್ಲ. ಇದು ಆಗಬಾರದು.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ (ವಿದ್ಯಾ ಶಾಖೆಯ ಉಪಮಂತ್ರಿಗಳು).—ಆ ಕಡೆ ಸದಸ್ಯರು ಸಿಕ್ಕಾಪಟ್ಟೆ ನಮ್ಮ ಮೇಲೆ ಮಾತನಾಡುವುದನ್ನು ಕೇಳುವುದಕ್ಕೆ ಮಂತ್ರಿಗಳಾಗಿ ನಾವು ಬರಲಿಲ್ಲ. ನಮಗೂ ಈ ಸಭೆಯ ಗೌರವ, ಘನತೆ ಎಂಬುದು ಗೊತ್ತಿದೆ. ಆ ಕಡೆ ಸದಸ್ಯರು ಆಡಿದಂತೆಲ್ಲಾ ಇಲ್ಲಿ ಕೇಳುವುದಕ್ಕೆ ಮಂತ್ರಿಗಳು ಬಂದಿಲ್ಲ. ಆ ಕಡೆಯ ಸದಸ್ಯರಿಗೆ ಎಷ್ಟರಮಟ್ಟಿಗೆ ಆತ್ಮಗೌರವ ಇದೆಯೋ ಅದಕ್ಕಿಂತಲೂ ಹೆಚ್ಚಿಗೆ ನಮಗೂ ಇದೆ. ಮಾನ್ಯ ಶ್ರೀ ಚನ್ನಯ್ಯನವರ ಬಗ್ಗೆ ನಾನು ಹೇಳುತ್ತಾ ಇಲ್ಲ. ಈ ಸಭೆಯ ಘನತೆ, ಗೌರವ ಮೀರಿ ಮಾತನಾಡಿದಂಥ ಮಾನ್ಯ ಸದಸ್ಯರ ಬಗ್ಗೆ ಒಂದು ಕಂಟ್ರೋಲ್ ಇರಬೇಕು. ಆ ಮಾನ್ಯ ಸದಸ್ಯರಿಗೂ ಇಂತಹ ವಿಷಯಗಳನ್ನು ಇಲ್ಲಿ ಮಾತನಾಡುವಾಗ ಒಂದು ಕಂಟ್ರೋಲ್ ಬೇಕು.

ಶ್ರೀ ಎಸ್. ಚನ್ನಯ್ಯ.—ನನ್ನನ್ನು ಸ್ಪೀಕರನ್ನಾಗಿ ಮಾಡಿ. ನಾನು ಆಗ ಇಂತಹ ಸಂದರ್ಭಗಳಲ್ಲಿ ಎಲ್ಲರನ್ನೂ ಆಚೆಗೆ ಕಳುಹಿಸುತ್ತೇನೆ. ನಮ್ಮ ಕಡೆಯವರು ಮಾಡಿದ್ದು ಸರಿಯೆಂದೂ ಹೇಳುವುದಿಲ್ಲ, ನೀವು ಮಾಡಿದ್ದು ಸರಿಯೆಂದೂ ನಾನು ಹೇಳುವುದಿಲ್ಲ. ಯಾರು ತಪ್ಪು ಮಾಡಿದರೋ ಅವರಿಗೆ ಶಿಕ್ಷೆ ಆಗಲಿ. ಆದರೆ ಸಭೆಯಲ್ಲಿ ಈ ರೀತಿ ಆಗಬಾರದು. ಮಂತ್ರಿ ಆಗುವುದೇ ತಪ್ಪು. ಆದಮೇಲೆ ಬಿಸಿ ಮಾತುಗಳು ಬಂದರೂ ಸುಧಾರಿಸಿಕೊಂಡು ಹೋಗಬೇಕು.

ಶ್ರೀ ಎ. ಪಿ. ಅಪ್ಪಣ್ಣ (ಕೈಗಾರಿಕಾ ಶಾಖೆಯ ಉಪಮಂತ್ರಿಗಳು).—ಮಂತ್ರಿ ಆಗುವುದು ತಪ್ಪು ಎಂಬುದನ್ನು ನಾನು ಒಪ್ಪುವುದಿಲ್ಲ. I cannot hear everything and swallow it.

Sri S. SIVAPPA.—I raised a relevant and specific question before this House about the leakage of S. S. L. C. Examination question paper. The question paper of 3rd April 1968 is already in my hands sent by somebody. This information of leakage has been given to this House. I raised this question and I expected a fitting answer from the Minister concerned. In respect of that, an hon. Member from this side was explaining what should be done.

Mr. SPEAKER.—He asked him to resign.

Sri S. SIVAPPA.—If secrecy is not maintained, where is the sanctity attached to the question paper? The Minister is not in a position to explain. The Minister is so much touchy when a member of this side was just explaining as to what to do in this matter. That is a parliamentary way of doings things. If he is dissatisfied with that why should we sit here? I am asking whether the sanctity of the S. S. L. C. examination is maintained and whether the purity of the examination is maintained. The Minister has to take the responsibility on himself. If he is so conscious; he has to resign. It is a democratic procedure. I expect an answar from him.

Sri M. S. KRISHNAN (Malleswaram).—Sri Shivappa raised the issue of the leakage of question paper. He was about to finish. At that time you were pleased to request the Deputy Minister to make a statement. In between Sri Gangadhar said that the Deputy Minister need not make any statement and instead he should resign. Sri Vatal Nagarai was

saying that the Minister for Education should speak on this. In the meantime Sri Appanna, Deputy Minister, began shouting against Sri Vatal Nagaraj, who also stood up and said that he should resign. But Sri Appanna was directly telling Sri Vatal Nagaraj *Neenu Kuthugo*. He was addressing him in singular. He should not be so touchy. He is a Deputy Minister.

(*Sri N. M. Kotrabasaiah Sogi stood up*)

MR. SPEAKER.—He is on a point of order. Nobody should interrupt.

Sri M. S. KRISHNAN.—I am glad you said like that. The point is as far as Sri Appanna is concerned, he should not have uttered like that. He is also a Deputy Minister.

Sri A. P. APPANNA.—I have got questions in the Council. I may be permitted to go to the Council.

Sri M. S. KRISHNAN.—The Deputy Minister Sri Appanna being a Deputy Minister, apart from being a member of this House, has no business to address the other members of this House including Sri Vatal Nagaraj in singular. It is defamatory and incriminatory according to Rules 288 and 289. The Rule 288 reads as follows :

> "The Member while speaking shall not—(ii) make a personal charge against a member; (v) reflect upon the conduct of persons in high authority unless the discussion is based on a substantive motion drawn in proper terms: (vii) utter treasonable, seditious or defamatory words (viii) use his right of speech for the purpose of obstructing the business of the Assembly."
> Rule 289 reads as follows.
>
> "No allegation of a defamatory or incriminatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investigation into the matter for the purpose of reply."

Therefore it is highly defamatory and incriminatory and it is not according to the rules prescribed for the august House.

Sri H. N. NANJE GOWDA.—According to Rule 315, the words uttered by Sri Appanna should be expunged.

2–30 P.M.

Sri B. P. GANGADHAR.—Sir, I rise to a point of order under rule 311 read with rule 388. The Hon. Leader of the Opposition not only produced a question paper and submitted to the House that there is leakage of question papers but he also made a brief statement. Then you called upon the Deputy Minister to make a statement because facts are distorted here; I want to make this representation.

Mr. SPEAKER.—No representation can be made.

Sri B. P. GANGADHAR.—On a point of order, I want to say these points.

Mr. SPEAKER.—The hon. member is wasting the time of the House.

Sri B. P. GANGADHAR.—I am sorry that the Speaker is saying that I am wasting the time of the House. I was only submitting that more powers have not been delegated to the Deputy Minister and it may not be reasonable for us to expect him to make the statement in a matter like this which is a very serious one. The Minister concerned is Sri Shankara Gowda and he is not here to make a responsible statement. That is why I was just saying that if it is true, the Minister concerned must resign. That was misinterpeted to say that "Mr. Sogi must resign. I know fully well that Deputy Ministers have not been given all powers. Only restricted powers are given to them. I do not know why another Deputy Minister should start making violent gestures. He was very vehement and he was almost making defamatory speech and addressing an hon. Member Sri Vatal Nagaraj on this side in singular terms. He got into a battle-mood. He was probably remembering Gen, Kariappa. That sort of an attitude is highly deplorable. These things are going on under your very nose. Because he was violent, he deserves to be expelled from the House and for all the utterances he has made, he must be taught a good lesson.

ಶ್ರೀ ಕೆ. ಪುಟ್ಟಸ್ವಾಮಿ (ನ್ಯಾಯ, ಕಾರ್ಮಿಕ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ಸ್ವಾಮಿ, ಎರಡು ಗಂಟೆಯಿಂದ ಮೂರು ಗಂಟೆಯವರೆಗೆ ಗ್ರಹಗತಿ ಚೆನ್ನಾಗಿಲ್ಲವೆಂದು ಕಾಣುತ್ತದೆ.

ಶ್ರೀ ಎಚ್. ಸಿದ್ಧವೀರಪ್ಪ (ಹರಿಹರ).—ಮಾಟ ಮಾಡಿಸಿರಬಹುದು.

ಶ್ರೀ ಕೆ. ಪುಟ್ಟಸ್ವಾಮಿ.—ಮಾಟ ಮಾಡಿಸುವ ಶಕ್ತಿ ನನಗೆ ಇದ್ದರೆ ಎರಡು ಗಂಟೆಯಿಂದ ಮೂರು ಗಂಟೆಯವರೆಗೆ ಯಾರೂ ಮಾತನಾಡದಂತೆ ಮಾಟ ಮಾಡಿಸುತ್ತಿದ್ದೆ. ಮಾನ್ಯ ಸಿದ್ಧವೀರಪ್ಪನವರು ಹಿಂದೆ ಗೃಹ ಮಂತ್ರಿಗಳಾಗಿದ್ದಾಗ ಮಾಟದ ಒಂದು ಕೇಸ್‌ನಲ್ಲಿ ಅಭಿರುಚಿ ತೆಗೆದುಕೊಂಡಿದ್ದರು. ಆದ್ದರಿಂದ ಅವರೇ ನಮಗೆ ಮಾಟ ಮಾಡಿಸುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ಎಚ್. ಸಿದ್ಧವೀರಪ್ಪ.—64 ವಿದ್ಯೆಗಳಲ್ಲಿ ಅದೂ ಒಂದು.

ಶ್ರೀ ಕೆ. ಪುಟ್ಟಸ್ವಾಮಿ.—ಆ ವಿದ್ಯೆಯಲ್ಲಿ ಪರಿಣತರಾದ ಒಬ್ಬರನ್ನು ತಾವು ಮಂತ್ರಿಗಳಾಗಿದ್ದಾಗ ಹಿಡಿಸಿ ಶಿಕ್ಷೆ ಮಾಡಿಸಿದ್ದೀರಿ. ನನಗನ್ನಿಸುತ್ತದೆ, ಈ ಸಭೆಯ ಗೌರವ ಘನತೆಯ ದೃಷ್ಟಿಯಿಂದ ಆ ವಿದ್ಯೆ ನನಗೆ ಗೊತ್ತಿದ್ದರೆ 2 ರಿಂದ 3 ಗಂಟೆಯವರೆಗೆ ಸಮಾಧಾನದಿಂದ ವ್ಯವಹಾರ ನಡೆಯುವಂತೆ ಮಾಡಬಹುದಾಗಿತ್ತು ಎಂದು.

ಅಧ್ಯಕ್ಷರು.—ದಿನವೆಲ್ಲಾ ಸಭೆ ಸಮಾಧಾನದಿಂದ ನಡೆಯುವಂತೆ ಏಕೆ ಮಾಡಿಸಬಾರದು ?

ಶ್ರೀ ಕೆ. ಪುಟ್ಟಸ್ವಾಮಿ.—ಆ ರೀತಿ ಮಾಡಿಸಿದರೆ ಅಧ್ಯಕ್ಷರನ್ನು ಹಿಡಿಯುವುದು ಕಷ್ಟವಾಗುತ್ತದೆ. ಮಾನ್ಯ ಶಿವಪ್ಪನವರು ಈ ಸಭೆಯ ಗಮನಕ್ಕೆ ತಂದಂಥ ವಿಚಾರ ಬಹಳ ಗಹನವಾಗಿದೆ. ಇದು ಬಹಳ ದೊಡ್ಡ ರೋಗವಾಗಿದೆ. ಇದು ನಮ್ಮ ರಾಜ್ಯಕ್ಕೇ ಬಂದಿರುವುದು ಅಲ್ಲ. ಇಂತಹ ಪಿಡುಗು ಆಗಾಗ್ಗೆ ಬರುತ್ತದೆ. 1963ರಲ್ಲಿ ಇದೇ ರೀತಿ ಪ್ರಶ್ನೆ ಪತ್ರಿಕೆಗಳು ವಿಧಾನಸೌಧದ ಸುತ್ತಲೂ ಓಡಾಡಿದಾಗ ಪುನಃ ಪರಿಕ್ಷೆಯನ್ನು ಮಾಡಬೇಕಾಯಿತು. ಈಗ ಮತ್ತೆ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ವಿಚಾರದಲ್ಲಿ ಸರ್ಕಾರ ಗಮನ ಕೊಟ್ಟು ಪ್ರಕಟವಾಗಿರುವ ಆ ಪ್ರಶ್ನೆ

ಪತ್ರಿಕೆ ನಿಜವಾದ ಪ್ರಶ್ನೆ ಪತ್ರಿಕೆಯಾಗಿದ್ದರೆ ಏನು ಕ್ರಮ ಕೈಗೊಳ್ಳಬೇಕು ಎಂಬುದನ್ನು ನೋಡಬೇಕಾಗುತ್ತದೆ ಮತ್ತು ಮುಂದಿನ ದಿವಗಳಲ್ಲಿ ನಡೆಯುವ ಬೇರೆ ಬೇರೆ ಪ್ರಶ್ನೆ ಪತ್ರಿಕೆಗಳ ವಿಚಾರದಲ್ಲಿ ಎಚ್ಚರಿಕೆಯ ಕ್ರಮ ಕೈಕೊಳ್ಳಬೇಕಾಗುತ್ತದೆ. ಅದನ್ನು ಕೈಕೊಳ್ಳುತ್ತೇವೆ.

ಇನ್ನು ಒಂದು ವಿಚಾರವನ್ನು ಈ ಸಭೆಗೆ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಹೀಗೆ ಹೇಳುತ್ತೇನೆ ಎಂದು ಮಾನ್ಯ ಸದಸ್ಯರು ಯಾರೂ ಕೋಪ ಮಾಡಿಕೊಳ್ಳಬಾರದು. ಶ್ರೀಮಾನ್ ಗಂಗಾಧರ್‌ರವರು ಹೇಳುವಂತೆ ಇಲ್ಲಿ ನಡೆದುಕೊಂಡ ರೀತಿ ಕಂಡೆಮ್ನಬಲ್ ಆಗಿರಬಹುದು.

ಶ್ರೀ ಬಿ. ಪಿ. ಗಂಗಾಧರ್.—ಹೋಗೋ, ಬಾರೋ ಎಂದು ಹೊಡೆಯುವುದಕ್ಕೇ ಬರುತ್ತಾರಲ್ಲ, ಸ್ವಾಮಿ.

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀಮಾನ್ ಚನ್ನಯ್ಯನವರು ಇಲ್ಲಿ ಒಂದು ಮಾತು ಹೇಳಿದರು. ಅವರು ಹೇಳಿದುದನ್ನು ನಾನೂ ಕೂಡ ಒಪ್ಪುತ್ತೇನೆ. ನಾವು ಕೂಡ ಮನುಷ್ಯರು, ನಾವೇನೂ ದೇವತೆಗಳಲ್ಲ. ನಮಗೂ ಹೆಚ್ಚು ಸಹನೆ ಇದೆ ಎಂದು ಭಾವನೆ ಮಾಡಿಕೊಂಡಿಲ್ಲ. ಸ್ವಾಭಾವಿಕವಾಗಿ ಯಾರು ಅಧಿಕಾರದಲ್ಲಿದ್ದಾರೋ ಅವರ ಚರ್ಮವೂ ಕೂಡ ಸ್ವಲ್ಪ ರಫ್ ಆಗಿರುತ್ತದೆ. ಇಲ್ಲಿ ಕುಳಿತು ಸುಮಾರು ಒಂದೂವರೆ ತಿಂಗಳಿಂದಲೂ ನಮಗೂ ಕೂಡ ನಮ್ಮ ತಾಳ್ಮೆ ಮೀರಿ ಹೋಗಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿ ಎಂದು ಯಾರೂ ಭಾವನೆ ಮಾಡಿಕೊಳ್ಳಬೇಕಾಗಿಲ್ಲ. ಮಾತು ಎತ್ತಿದರೆ ರಾಜೀನಾಮೆ ಕೊಡಬೇಕು ಎಂದು ಹೇಳುವುದು ಆ ಕಡೆಯವರಿಗೆ ಆಜನ್ಮಸಿದ್ಧವಾದ ಹಕ್ಕು, ಅಧಿಕಾರದಲ್ಲಿರಲು ನಾವು ಅನರ್ಹರು, ಮತ್ತು ನಿಮ್ಮ ಕೆಲಸಗಳನ್ನು ಬಿಟ್ಟು ಹೋಗಿ ಎಂದು ಹೇಳಿದರೂ ನಾವು ಕೋಪಮಾಡಿಕೊಳ್ಳುವುದಿಲ್ಲ. ತಮ್ಮ ಮುಂದೆ ಎಷ್ಟು ಬೇಕಾದರೂ ಹೇಳಲಿ, ಎಷ್ಟು ಬೇಕಾದರೂ ತೆಗಳಲಿ, ಅದಕ್ಕಾಗಿ ಸ್ವಾಭಾವಿಕವಾಗಿ ಅವರಿಗೆ ಬಹಳ ಅವಕಾಶ ಕೊಡುತ್ತಿದ್ದೀರಿ. ನಾವೂ ಅದಕ್ಕೆ ಉತ್ತರ ಕೊಡುತ್ತೇವೆ. ಅವರು ಯಾವ ನಾಣ್ಯದಲ್ಲಿ ಕೊಟ್ಟಿರುತ್ತಾರೋ ಅದೇ ನಾಣ್ಯವನ್ನೇ ನಾವು ವಾಪಸು ಕೊಡುವಾಗ ಅದಕ್ಕೆ ಕೋಪಮಾಡಿಕೊಳ್ಳಬಾರದು.

ಶ್ರೀ ಕೆ. ಎಚ್. ಪಾಟೀಲ್ (ಗದಗ).—ತೆಗಳಲಿ ಎಂದರೆ ಬಗಳಲಿ ಎಂದಾಗುತ್ತದೆ. ನಾವು ಹಾಗೆ ಹೇಳಿದರೆ ಸರಿಯಲ್ಲ ಎನ್ನುತ್ತಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀಮಾನ್ ಕೆ. ಎಚ್. ಪಾಟೀಲರವರು ಗದಗ್‌ನಿಂದ ಬಂದವರು. ನಾನೂ ಕೂಡ ಗದುಗಿನ ನಾರಾಯಣಪ್ಪನವರ ಭಾಷೆಯನ್ನು ಓದಿ ತಿಳಿದಿದ್ದೇನೆ. ತೆಗಳಲಿ ಎನ್ನುವುದಕ್ಕೆ ಏನು ಅರ್ಥ ಇದೆ ಎನ್ನುವುದು ನನಗೂ ಗೊತ್ತಿದೆ. ಅವರು ಬೇರೆ ಒಂದು ಶಬ್ದ ಏನು ಹೇಳಿದರು ಅದಕ್ಕೆ ಒಂದಕ್ಕೊಂದು ಅಜಗಜಾಂತರ ವ್ಯತ್ಯಾಸ ಇದೆ. ನಾನೇನಾದರೂ ಭಾಷಣ ಮಾಡುವಾಗ ಅಂತಹ ಪದಗಳನ್ನು ಉಪಯೋಗಿಸಿದ್ದರೆ ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ಶ್ರೀಮಾನ್ ಗಂಗಾಧರ್‌ರವರಲ್ಲಿ ನಾನು ವಿನಂತಿ ಮಾಡುವುದು ಏನೆಂದರೆ ಅವರು ಒಳ್ಳೆಯ ಖ್ಯಾತಿ ಪಡೆಯುವಂತಹವರು ಮತ್ತು ವಕೀಲರೂ ಆಗಿದ್ದಾರೆ. ಶ್ರೀಮಾನ್ ಶಿವಪ್ಪನವರು ಇಲ್ಲಿ ಹೇಳಿದುದಕ್ಕೆ ಉತ್ತರ ಕೊಡುವುದಕ್ಕೆ ನನ್ನ ಅಧಿಕಾರ ವ್ಯಾಪ್ತಿಯಿಲ್ಲ ಎಂದು ಹೇಳಿದರು. ಇದರ ಅಂತರ್ಯ ನನಗೆ ಅರ್ಥವಾಗುತ್ತಿಲ್ಲ. ನಾನೇ ಇಂದು ಮಿನಿಸ್ಟರ್, ವಿತೌಟ್ ಪೋರ್ಟ್‌ಫೋಲಿಯೋ ಎಂದು ಆಗಿರಬಹುದು. ಆದರೆ ನನ್ನ ಜವಾಬುದಾರಿ ಸರ್ಕಾರದ ಪಕ್ಷವಾಗಿ ಯಾರ ಪರವಾಗಿ ಬೇಕಾದರೂ ಇಲ್ಲಿ ಉತ್ತರಕೊಡಬಹುದು. ನಮ್ಮ ಕೌನ್ಸಿಲ್ ಆಫ್ ಮಿನಿಸ್ಟರುಗಳಲ್ಲಿ ಇರುವ 29 ಜನರಲ್ಲಿ ಯಾವ ಮಂತ್ರಿಗಳು ಬೇಕಾದರೂ ಇನ್ನೊಬ್ಬರ ಪರವಾಗಿ ಇಲ್ಲಿ ಉತ್ತರ ಕೊಡಬಹುದು. ಶ್ರೀಮಾನ್ ಸೋಗಿಯವರು ನಾನು ಇಲ್ಲದ ವೇಳೆಯಲ್ಲಿ ನನ್ನ ಪರವಾಗಿ ಉತ್ತರ ಕೊಡಬಹುದು, ಇಲ್ಲವೇ ಮಾನ್ಯ ಮುಖ್ಯಮಂತ್ರಿ ಪರವಾಗಿ ಇಲ್ಲಿ ಉತ್ತರ ಕೊಡಬಹುದು. ಅವರಿಗೂ ಈ ಅಧಿಕಾರ ಇದೆ. ಸರ್ಕಾರದ ಪರವಾಗಿ ಉತ್ತರ ಕೊಡುವುದೇ ತಪ್ಪು ಎಂದರೆ ಅದು ಸರಿಯಲ್ಲ. ಮತ್ತೆ ಅವರು ಹೇಳಿದರು ಉತ್ತರ ಕೊಡಲಿಕ್ಕೆ ಅವರು ಯಾರು ಎಂದು ಈ ಗಲಾಟೆ ಎಲ್ಲಿಂದ ಶುರುವಾಯಿತು ಎಂದರೆ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಚಳುವಳಿಗಾರರು. ಇಲ್ಲಿಯೂ ಕೂಡ ಚಳುವಳಿ ಮಾಡುತ್ತಾರೆ. ಇಲ್ಲಿ ಅವರು ಏನು ಹೇಳಿದರು ಎಂದರೆ "The Minister is incompetent to reply and he must resign" ಎಂದು. ಅದು ಏನಾಗುತ್ತದೆ ಎಂದರೆ ನಾವೂ ಕೂಡ ಉಪ್ಪು, ಖಾರ ತಿಂದು ಬಂದಿದ್ದೇವೆ, ಸಪ್ಪೆ ತಿಂದು ಏನೂ ಬಂದಿಲ್ಲ.

SRI H. SIDDAVEERAPPA.—Is there anything unparliamentary in what Sri Vatal Nagaraj has said ?

Sri K. PUTTASWAMY.—I never said it is unparliamentary. I agree with the hon'ble Member Sri Siddaveerappa that it is definitely not unparliamentary, but it is not complimentary. It is human nature to accept some complimentary remarks. The hon'ble Members of the Opposition, in season and out of season are hurling uncomplimentary words at us and sometime or other they must extend complimentary words also. Anyway I regret very much for what has happened. I would make an appeal to all members not to lose temper on the floor of the House. It applies to all members whether on this side or the other side. May I appeal to the hon'ble Members of the Opposition not to try our patience ?

Sri H. SIDDAVEERAPPA.—I am only making a request that somehow or other the dignity, decorum and decency of the House must be maintained and it is accepted by all sides. We are not opposed to it. If you go to the Mother of Parliaments, you will see that tempers are lost to such an extent that even shoe beating has taken place. Fist fighting and all that has taken place. But we must credit ourselves that we do not go to that extent. What I am saying is, by all means, advise us. But if you see the proceedings you will find, how often you have called to order Sri Vatal Nagaraj, Sri Azeez Sait, may be, for justifiable reasons ; but at least only once, when such things happen from the other side, why not your rod fall on them ? I want to know this. If the rod is swayed on both sides, probably everything will be all right.

Sri S. BANGARAPPA.—On a point of order.

Mr. SPEAKER.—The member must complete it in one minute.

Sri B. P. GANGADHAR.—The Minister was given more time to explain. But when the hon. Member wants to raise a point of order, you fix some time limit. You have been restricting every one of us. When the hon. member wants to make a full impression of the matter and convince the Chair, you must give him sufficient time.

Mr. SPEAKER.—As regards this point, the Speaker can put a time limit, because things cannot go on for any length of time. Under the residuary powers, whenever a point of order is raised with reference to a rule, I can say that it should be over in a minute or two and this should be taken as a procedure hereafter.

†ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಈ ದಿವಸ ಅನೇಕ ಮಾನ್ಯ ಸದಸ್ಯರು ಈಗಾಗಲೇ ಅನೇಕ ಕ್ರಿಯಾಲೋಪಗಳನ್ನು ಎತ್ತಿದ್ದಾರೆ. ನಾನಾದರೂ ಕೂಡ ಮಾನ್ಯ ಕೃಷ್ಣನ್ ಅವರು ಕೋಟ್ ಮಾಡಿರತಕ್ಕ ರೂಲ್ ಪ್ರಕಾರವೇ ಕ್ರಿಯಾಲೋಪವನ್ನು ಎತ್ತುವುದಕ್ಕೆ ಇಷ್ಟಪಡುತ್ತೇನೆ. ಆ ವಿಷಯದಲ್ಲಿ ಮಾತನಾಡುತ್ತಾ ಮಾನ್ಯ ಪುಟ್ಟಸ್ವಾಮಿಯವರಿಗೆ ನಾನು ಅಭಾರಿಯಾಗಿದ್ದೇನೆ ಎರಡು ವರ್ಷಗಳಲ್ಲಿ ಈ ಸಭೆಯಲ್ಲಿ ಮಾತನಾಡಿದ ಬಗ್ಗೆ ಈವೊತ್ತು ಅವರು ಮಾತನಾಡಿದ್ದರಲ್ಲಿ ಕೊನೇ ಅರ್ಧ ಭಾಗವನ್ನು ಮಾತ್ರ ನಾನು ಮೆಚ್ಚುತ್ತೇನೆ. ಅದು ಯಾವುದೆಂದರೆ ನಾವು ಅನ್ ಪಾರ್ಲಿಮೆಂಟರಿ ಶಬ್ದಗಳನ್ನು ಉಪಯೋಗ ಮಾಡಬಾರದು, ಯಾರೇ ಆಗಲೀ ಈ ಕಡೆಯವರೇ ಆಗಲೀ, ಆ ಕಡೆಯವರೇ ಆಗಲೀ ಆ ರೀತಿ ಉಪಯೋಗ ಮಾಡಬಾರದು ಎನ್ನುವ ವಿಷಯ ಸಭೆಯಲ್ಲಿ ಯಾರೂಕೂಡ ಟೆಂಪರ್ ಕಳೆದುಕೊಳ್ಳಬಾರದು ಎನ್ನುವುದು ಒಂದು ವಿಷಯ, ಬಹಳ ಮೆಚ್ಚತಕ್ಕ ಸಂಗತಿಗಳು. ಅನ್‌ಪಾರ್ಲಿಮೆಂಟರಿ ಅಲ್ಲದೆ ಇದ್ದರೂ ಅನ್‌ಕಾಂಪ್ಲಿಮೆಂಟರಿ ಪದಗಳನ್ನೂ ಬಳಸಬಾರದು ಎಂದು ಅವರು ಹೇಳಿರುವುದು ಮೆಚ್ಚತಕ್ಕ ಸಂಗತಿ. ಈ ಸಂದರ್ಭದಲ್ಲಿ

ನಾನು ಸಾಂದರ್ಭಿಕವಾಗಿ ಪ್ರಸ್ತಾಪ ಮಾಡುವುದು ಏನೆಂದರೆ, ಶ್ರೀಮಾನ್ ಶಿವಪ್ಪನವರು ಎತ್ತಿರ ತಕ್ಕ ಪ್ರಶ್ನೆ ಪತ್ರಿಕೆಗಳು ಪರೀಕ್ಷೆಯಾಗುವುದಕ್ಕೆ ಮೊದಲೇ ಹೊರಗಡೆ ಬಂದು ಎಲ್ಲರಿಗೂ ಸಿಕ್ಕಿವೆ. ಮಾರ್ಕೆಟ್ಟಿನಲ್ಲಿ ಸಿಕ್ಕುತ್ತವೆ ಎಂದು ಹೇಳಿ ಇದು ಒಂದು ರ್‍ಯಾಕೆಟ್ ಎನ್ನುವ ಅಭಿಪ್ರಾಯವನ್ನು ವ್ಯಕ್ತ ಮಾಡಿದರು. ಮಾನ್ಯ ಉಪಮಂತ್ರಿಗಳು ಏನು ಉತ್ತರ ಹೇಳುತ್ತಾರೆಂಬುದನ್ನು ಕೇಳೋಣ ಎಂದು ತಾವು ಹೇಳಿದಾಗ ಶ್ರೀ ಗಂಗಾಧರ್ ಅವರು ಹೇಳಿದರು, Powers have not been delegated by the Minister concerned to the Deputy Minister and therefore he has no *locus standi* to say......ಎನ್ನುವ ಅರ್ಥದಲ್ಲಿ ತಿಳಿಸಿದರು. ಶ್ರೀಮಾನ್ ವಾಟಾಳ್ ನಾಗರಾಜ್ ಅವರೂ ಮಾತನಾಡಿದರು, ಶ್ರೀಮಾನ್ ಅಪ್ಪಣ್ಣನವರೂ ಮಾತನಾಡಿದರು. ಶ್ರೀಮಾನ್ ಪುಟ್ಟಸ್ವಾಮಿಯವರು ಇದರ ಬಗ್ಗೆ ಒಂದು ಮಾತನ್ನು ಹೇಳಿದರು. ಶ್ರೀ ಅಪ್ಪಣ್ಣನವರು ಸ್ವಲ್ಪ ಹಿಡಿತದಲ್ಲಿರಬೇಕಾಗಿತ್ತು. ಈ ಕಡೆಯಲ್ಲಿಯೂ ಕೆಲವರು ಅಂದಿರ ಬಹುದು. "ಕೂತುಕೋ, ನೀನು ಏನು ಹೇಳಬೇಕಾಗಿಲ್ಲ" ಎಂದು ಏಕವಚನದಲ್ಲಿ ಪದಗಳ ಪ್ರಯೋಗ ಮಾಡುವುದು ಸಲ್ಲದು ಎನ್ನುವ ಅಭಿಪ್ರಾಯವನ್ನು ಎಲ್ಲರೂ ಒಪ್ಪಬೇಕಾದ್ದೇ. ಹಾಗೆಯೇ ಈ ಕಡೆಯವರು ಕೂಡ ಮಾತನಾಡಿದರೆ ತಪ್ಪು ಎಂದಾಗುತ್ತದೆ. ಅಧ್ಯಕ್ಷರು ಅಂಥ ಮಾತುಗಳನ್ನು ವಾಪಸು ತೆಗೆದುಕೊಳ್ಳಬೇಕು ಎಂದರೆ ವಾಪಸು ತೆಗೆದುಕೊಳ್ಳಬೇಕಾಗುತ್ತದೆ. ಶ್ರೀ ಅಪ್ಪಣ್ಣನವರು ಮತ್ತು ಈ ಕಡೆಯವರು ಯಾರಾದರೂ ಅಂದಿದ್ದರೆ ಅದನ್ನು ಕೂಡ ವಾಪಸ್ಸು ತೆಗೆದುಕೊಳ್ಳಬಹುದು. ಒಂದು ವೇಳೆ ಬೇಡ ಅದು ಅಲ್ಲಿಗೆ ಹೋಗಲಿ ಎಂದು ಬೇಕಾದರೂ ಬಿಡಬಹುದು.

ಈ ಸಂದರ್ಭದಲ್ಲಿ ಒಂದು ಮಾತನ್ನು ಗಂಗಾಧರ್ ಅವರು ಹೇಳಿ ಮಂತ್ರಿಗಳು ರಾಜಿನಾಮೆ ಕೊಡಬೇಕು ಎಂದು ಹೇಳಿದಾಗ ಅಧ್ಯಕ್ಷರು ಹೇಳಿದರು, ಮಂತ್ರಿಗಳ ರಾಜಿನಾಮೆಗೆ ಏಕೆ ಒತ್ತಾಯ ಮಾಡುತ್ತೀರಿ ಎಂದು. ನಾನು ಅಧ್ಯಕ್ಷರಿಂದ ಒಂದು ಮಾತನ್ನು ಪಡೆಯುವುದಕ್ಕೆ ಇಷ್ಟ ಪಡುತ್ತೇನೆ. ಈ ಸಭೆಯಲ್ಲಿ ನಾವು ಸದಸ್ಯರಾಗಿ ಬಂದ ಮೇಲೆ ವಿದ್ಯಾ ಇಲಾಖೆಯು ಅಥವಾ ಯಾವುದೇ ಇಲಾಖೆಯ ತಪ್ಪುಗಳು ಕಂಡುಬಂದ ಮೇಲೆ ಅದರ ಬಗ್ಗೆ ಪ್ರಸ್ತಾಪ ಮಾಡಬೇಡವೇ? ನಾಳೆಯ ದಿನ ಪರೀಕ್ಷೆಗೆ ಇರುವ ವಿಷಯದ ಪ್ರಶ್ನೆ ಪತ್ರಿಕೆಗಳು ಮುಂಚಿತವಾಗಿ ಬೆಂಗಳೂರು ನಗರದಲ್ಲಿ ಮಾರ್ಕೆಟ್ಟಿನಲ್ಲಿ ಸಿಕ್ಕುತ್ತವೆ ಎಂದರೆ ವಿದ್ಯಾ ಇಲಾಖೆಯ ದುರಾಡಳಿತ ಎಷ್ಟರಮಟ್ಟಿಗೆ ಇದೆ, ಅಲ್ಲಿ ಲಂಚದ ಹಾವಳಿ ಎಷ್ಟರಮಟ್ಟಿಗೆ ಇದೆ ಎನ್ನುವುದು ಎಲ್ಲರಿಗೂ ತಿಳಿಯುತ್ತದೆ. ಈ ಸದನಕ್ಕೆ ನಾವು ಬಂದ ಮೇಲೆ ವಿದ್ಯಾ ಇಲಾಖೆಯಲ್ಲಿ ಇಷ್ಟೊಂದು ತಪ್ಪುಗಳಾಗಿದ್ದರೂ ಪ್ರಶ್ನೆ ಪತ್ರಿಕೆಗಳು ಹೊರಗೆ ಬಂದಿದ್ದರೂ ಮಂತ್ರಿಗಳು ರಾಜಿನಾಮೆ ಕೊಡಬೇಕು ಎಂದು ಹೇಳುವ ಅಧಿಕಾರ ವಿದೆಯೋ ಇಲ್ಲವೇ ಎನ್ನುವ ಪ್ರಶ್ನೆ ಬರುತ್ತದೆ. ಅಧ್ಯಕ್ಷರು ಆ ಮಾತನ್ನು ಏಕೆ ಹೇಳಿದರು ಎನ್ನುವುದು ಗೊತ್ತಿಲ್ಲ. ನಾನು ಅಧ್ಯಕ್ಷರಲ್ಲಿ ನಮ್ರತೆಯಿಂದ ಕೇಳುತ್ತೇನೆ. ತಾವು ಆ ಮಾತನ್ನು ಹೇಳುವು ದಕ್ಕೆ ಕಾನೂನು ಪ್ರಕಾರ ಅಧಿಕಾರವಿದೆಯೋ? ಆ ರೀತಿ ಅಧಿಕಾರವಿದೆ ಎಂದು ನಾನು ಭಾವನೆ ಮಾಡುವುದಿಲ್ಲ. ಎರಡನೆಯದು ತಮಗೆ ಅಧಿಕಾರವಿದ್ದರೂ ಪ್ರಶ್ನಪತ್ರಿಕೆ ಲೀಕಾಯಿತು ಅದಾಗ ವಿಷಯವನ್ನು ಒತ್ತಾಯಮಾಡಲು ಸರಿಯೆಂಬುದನ್ನು ತಾವೂ ಒಪ್ಪುತ್ತೀರಿ ಎಂದು ನಾನು ಭಾವಿಸುತ್ತೇನೆ. ಶಿವಪ್ಪನವರು ಪ್ರಶ್ನೆಪತ್ರಿಕೆಯನ್ನು ಕೊಡುವರು. ನಿಜವಾಗಿಯೂ ಪ್ರಶ್ನೆ ಪತ್ರಿಕೆಯು ಲೀಕ್ ಆಗಿರುವುದು ಸರಿಯೆಂದು ಗೊತ್ತಾದರೆ ಸರಕಾರ ರಾಜೀನಾಮೆ ಕೊಡಬೇಕು. ನಮಗಿರುವ ಕೇಳುವ ಹಕ್ಕನ್ನು ಮೊಟಕು ಮಾಡುವುದಾದರೆ ನಾವೇಕೆ ಈ ಸಭೆಗೆ ಬರಬೇಕು ಎಂಬುದೇ ನನ್ನ ಕ್ರಿಯಾಲೋಪ.

MR. SPEAKER.—I agree with the sentiments expressed by the hon. Member Sri Channaiah, the Hon. Minister for Parliamentary Affairs, the hon. Member Sri Siddaveerappa and others. They made certain observations over the tension in the House; I very much regret that what has happened does not do credit to anybody. Points were raised by Members on this side as well as on that side; tempers were lost and utter confusion prevailed in the House. When there was utter confusion in the House, what can the Presiding Officer do? In that confusion, I have not been able to follow or hear anything. If the members want the Presiding Officer to be effective, I request all the hon. Members to maintain calm atmosphere so that the Presiding officer may be able to hear everything and take such action as the

(Mr. Speaker)

rules require. When it was not possible to hear anything, to listen to anything and when confusion reigned supreme, nobody can help. I request the hon. Members to avoid such situations hereafter at least.

I found Members from this side and that side rising, talking without permission and not showing obedience to the Chair. I am sorry if such behaviour is resorted to here, it does not redound to the credit of any hon. Member. I am saying this irrespective of considerations of groups or this party or that party. The Hon. House knows and the Leaders of both the sides know and it is a well-known fact that there are some hon. Members who frequently rise, disobey the Chair in season and out of season, create confusion, flout rules and are never amenable to discipline.

The Hon. Leader of the Opposition wanted some information on a certain point. The point raised by him was a very important one and nobody has doubted it. He stated that a certain Question Paper of S.S.L.C. was on sale, etc. The leakage of questions was certainly a very important issue and, therefore, I wanted to know from the Hon. Deputy Minister for Education what he had to say. The issue was raised in the House suddenly and so the Hon. Deputy Minister had no notice of it. Still, I wanted to request the Hon. Deputy Minister to let us know whether he was prepared to make a statement on the important issue. But when I was still on my legs, the hon. Member Sri B. P. Gangadhar chose to rise, ignored my request to him to resume his seat and stated that the Deputy Minister was not competent to make a statement and that the Minister should resign. When I called upon the Hon. Deputy Minister and asked him whether he had anything to say, it was for the Deputy Minister to reply. My point is: when I called upon the Hon. Deputy Minister to intimate whether he could make a statement, and when I was still on my legs, the hon. Member Sri Gangadhar intervened and remarked that the Deputy Minister was not competent to make a statement and that the Minister should resign. What he stated was not in the proper context and it was improper and highly worng. That should not happen. When the Chair is giving direction and is still standing, how can any Member suddenly stand up and make remarks even without listening to what the Government has to say ? I think certain standards have to be maintained in the House.

In democracy, there should be organised debate. Any Member is at liberty to make any criticisms but everybody has to observe decorum and certain well laid down procedures. Let each side have patience to listen without interruption to the other side. If an hon. Member of the ruling party is speaking, the members on the Opposition side should give him a patient hearing. Similarly, when a member on the Opposition side, senior or junior, is addressing the House, let the Members of the ruling party hear him patiently and not interrupt him. That is a proper debate. Debate means organised speaking, orderly behaviour and organised listening. Unless this is done, no democratic or parliamentary procedure is likely to succeed. I conclude by saying that it

was not at all correct on the part of the hon. Member Sri Gangadhar to have stood up when I was still on my legs and to make remarks that the Hon. Deputy Minister for Education should not make a statement and the Hon. Minister should resign.

Sri B. P. GANGADHAR.—You may kindly peruse the records before making observations about me. If you go through the records, you will know that I am not incorrect.

Mr. SPEAKER.—It was not correct on the part of the Member to have stood up when I was standing. Secondly, it was not proper on the part of the member to ask the Deputy Minister not to make a statement. Sri Bangarappa will take note of what I said in this particular context. I heard what Sri Gangadhar stated and I also observed his conduct. Therefore, hereafter I request hon. Members very earnestly to follow the rules strictly and always address the Chair and thus avoid exchanges among themselves. If anything wrong is done, and if I am not able to hear on account of prevalence of utter confusion, I cannot take any decision. A decision must be taken only out of personal knowledge and hearing. When I cannot hear, and know what has transpired what can I do ? I become helpless.

The Hon. Minister for Parliamentary Affairs has made some humorous references and that is heartily reciprocated by the other side. A very good atmosphere is created. I do not want to spoil that atmosphere. I request the hon. Members to co-operate with me and see that such episode is not repeated. If the Hon. Minister for Parliamentary Affairs wants to make a statement, he may do so. Perhaps he will make a statement after some time.

Now I call upon the Hon. Deputy Minister to make a statement.

Sri K. H. PATLI.—I rise to a point of order. Sri Shivappa has produced some question paper before the House. I have nothing to say regarding the words that have been used which do not bring respect to the House as well as to the Speaker. The Council of Ministers should be responsible to this House. They should not shirk to shoulder this responsibility. When they are collectively responsible, we as members of this House, have a right to question their integrity and honesty and demand from these Ministers their resignation. I am here to support Sri Sivappa's point that this House can demand the resignation of the Minister concerned, if not of the whole Ministry.

Mr. SPEAKER.—The Hon'ble Leader of the Opposition has brought out a point. We do not know whether the leakage is there and if there be leakage, who is responsible for it ? When a judgment is to be passed by this House, let it be done on the basis of full facts.

3.00 P.M.

Sri K. PUTTASWAMY.—Before the House rises, we will give that information.

†ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಸ್ವಾಮಿ, ಅಧ್ಯಕ್ಷರೇ, ಒಂದು ಇಲ್ಲಿ ಕ್ರಿಯಾಲೋಪವನ್ನು ಸೂಚಿಸಬೇಕಾಗಿರುವುದರಿಂದ ನನಗೆ ಎರಡು ನಿಮಿಷ ಅವಕಾಶ ಕೊಡಬೇಕೆಂದು ಕೇಳಿಕೊಂಡು ಆ ವಿಷಯ ಏನೆಂಬುದನ್ನು ತಿಳಿಸುತ್ತೇನೆ.

ಸ್ವಾಮಿ, ಈಗತಾನೆ ಸಭೆಯಲ್ಲಿ ಏನೊಂದು ಘಟನೆ ನಡೆಯಿತು ಇದರ ಸಂಬಂಧವಾಗಿ ಒಂದೆರೆಡು ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗ ನಡೆಯುತ್ತಿರುವ ಈ ಶಾಸನ ಸಭೆಯು ಕಳೆದ ಫೆಬ್ರವರಿ 21ನೆಯ ತಾರೀಖು ಏನು ಪ್ರಾರಂಭವಾಯಿತೋ ಅಂದಿನಿಂದ ಇಂದಿನ ವರೆಗೂ ಇತ್ತ ಕಡೆಯವರು ಮತ್ತು ಅತ್ತ ಕಡೆಯವರು ಈ ಸಭೆಯ ಘನತೆ ಗೌರವಗಳನ್ನು ಹೇಗೆ ಎತ್ತಿ ಹಿಡಿಯಬೇಕು ನಾವು ಇಲ್ಲಿ ಯಾವರೀತಿ ಸೌಜನ್ಯತೆಯಿಂದ ವರ್ತಿಸಬೇಕು ಎಂಬ ವಿಚಾರದಲ್ಲಿ ತತ್ವಗಳನ್ನೇನೋ ಹೇಳುತ್ತಿದ್ದೇವೆ. ಆದರೆ ಯಾರೊಬ್ಬರೂ ಈ ಸದನದ ಘನತೆಗೌರವಗಳನ್ನು ಅಥವಾ ನಮ್ಮ ರಾಜ್ಯದ ಒಂದು ಹಿರಿಮೆಯನ್ನು ಎತ್ತಿ ಹಿಡಿಯತಕ್ಕ ರೀತಿಯಲ್ಲಿ ವರ್ತಿಸುತ್ತಿಲ್ಲ ಎಂಬುದನ್ನು ತಿಳಿಸುವುದಕ್ಕೆ ನನಗೆ ಬಹಳ ವ್ಯಸನವಾಗುತ್ತದೆ.

ಯಾವ ರೀತಿ ಇಲ್ಲಿ ಕಾರ್ಯಕಲಾಪಗಳನ್ನು ಮುಂದುವರಿಸುತ್ತಿದ್ದಾರೆಂದರೆ, ಈ ದೇಶದ ಸಂಪತ್ತನ್ನು ದುರ್ವಿನಿಯೋಗ ಮಾಡುವುದಕ್ಕೆ ಬಂದಿದ್ದೇವೆಂದು ಕಾಣುತ್ತದೆ. ಈ ದೇಶದ ಅಭಿವೃದ್ಧಿಗಾಗಿ, ಒಂದು ಕಲ್ಯಾಣದೃಷ್ಟಿಯಿಂದ ನಾವು ಯಾರೊಬ್ಬರೂ ಕೆಲಸಮಾಡುತ್ತಾ ಇಲ್ಲ. ಈ ರೀತಿಯಾಗಿ ಪ್ರತಿದಿವಸವೂ ಒಂದು ಗಂಟೆಕಾಲ ವ್ಯರ್ಥವಾಗಿ ಕಾಲಕಳೆಯುತ್ತಿದ್ದೇವೆ. ಇದು ನಾಚಿಕೆಗೇಡು ಪ್ರಸಂಗವೆಂದು ನನಗೆ ವ್ಯಸನವಾಗುತ್ತದೆ. ಹಿರಿಯ ಸದಸ್ಯರಾದ ಮಾನ್ಯ ಶ್ರೀ ಚನ್ನಯ್ಯನವರು, ಕಳೆದ 40 ವರ್ಷಗಳಿಂದಲೂ ನಾನು ಪಾರ್ಲಿಮೆಂಟರಿ, ಪ್ರಜಾಪ್ರಭುತ್ವ ದಲ್ಲಿದ್ದುಕೊಂಡು ಎಲ್ಲವನ್ನೂ ನೋಡಿಕೊಂಡು ಬಂದಿದ್ದೇನೆ, ಯಾವ ರೀತಿ ಹಿಂದಿನವರು ಸಂಪ್ರದಾಯದ ರೀತಿಯಲ್ಲಿ ನಡೆಯುತ್ತಿದ್ದರು ಎಂಬುದನ್ನು ನೋಡಿದ್ದೇನೆ ಮತ್ತು ಕೇಳಿದ್ದೇನೆ, ಆದರೆ ಈ ದಿವಸ ನಡೆಯುತ್ತಿರುವ ಪ್ರಜಾಪ್ರಭುತ್ವದಲ್ಲಿ ನನ್ನಂಥವರು ಇರಬಾರದು, ರಾಜೀನಾಮೆ ಕೊಡಬೇಕೆಂದು ಬಹಳ ವ್ಯಸನದಿಂದ ಹೇಳಿದರು. ಇದರಲ್ಲಿ ನಮ್ಮ ಒಂದು ಸ್ವಪ್ರತಿಷ್ಠೆ ಬಹಳ ವಾಗಿದೆ ಎಂಬುದಾಗಿ ಹೇಳಬೇಕಾಗಿದೆ. ಇದರಿಂದಲೇ ನಾವು ಬಹಳವಾಗಿ ಹಿಂದುಳಿದಿದ್ದೇವೆ. ನಿಜವಾಗಿ ನಾವು ಈ ದೇಶದ ಘನತೆ, ಗೌರವವನ್ನು ಎತ್ತಿ ಹಿಡಿಯಬೇಕೆಂಬ ಉದ್ದೇಶದಿಂದ ಬಂದಿಲ್ಲವೆಂದು ನನಗೆ ತೋರುತ್ತದೆ. ಹಿರಿಯ ವಿದ್ಯಾವಂತರು, ಅನುಭವಿಗಳು ಇನ್ನು ಮುಂದಾದರೂ ಈ ಮಾನ್ಯ ಸಭೆಯ ಗೌರವದೃಷ್ಟಿಯಿಂದ ಸರಿಯಾದ ರೀತಿಯಲ್ಲಿ ನಡೆದುಕೊಳ್ಳುತ್ತಾರೆಂದು ಭಾವಿಸಿ, ಅವರಿಗೆ ಮತ್ತೊಮ್ಮೆ ಕಳಕಳಿಯಿಂದ ಮನವಿಮಾಡಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಈಗ ಮಾನ್ಯ ಶ್ರೀ ದೊಡ್ಡಬೋರೇಗೌಡರು ಹೇಳಿದ ವಿಚಾರ ಈ ಸಭೆಯ ಘನತೆ, ಗೌರವಗಳನ್ನು ಪ್ರಶ್ನೆಮಾಡುವ ರೀತಿಯಲ್ಲಿ ಹಗುರವಾಗಿ ಹೇಳಿದ್ದಾರೆ. ಈ ಶಾಸನ ಸಭೆಯಲ್ಲಿ ಯಾರೂ ಈ ಸಭೆಯ ಘನತೆ, ಗೌರವಗಳನ್ನು ಕಾಪಾಡುವ ಉದ್ದೇಶದಿಂದ ಮಾತನಾಡುತ್ತಾ ಇಲ್ಲವೆಂದು ಹೇಳಿದರು, ನಾನು ಅವರಿಗೆ ಇಷ್ಟು ಹೇಳುತ್ತೇನೆ. ಈ ಸಭೆಯ ಸದಸ್ಯರೆಲ್ಲರೂ ಈ ಸಭೆಯ ಘನತೆ, ಗೌರವಗಳನ್ನು ಕಾಪಾಡುವ ಉದ್ದೇಶದಿಂದಲೇ ಇಲ್ಲಿ ಬಂದಿದ್ದಾರೆ. ಇವತ್ತು ಈ ಶಾಸನಸಭೆಯಲ್ಲಿ ನಡೆಸಿರುವ ವಿಚಾರಗಳ ಬಗ್ಗೆ ಕಳವಳ ವ್ಯಕ್ತ ಪಡಿಸುವುದು ಈ ಸಭೆಯ ಘನತೆ, ಗೌರವಗಳಿಗೆ ತಕ್ಕಹಾಗೆ ಕೆಲಸ ನಡೆದಿಲ್ಲವೆಂದು ಆತಂಕವಾಗಿ ಹೇಳುವ ಮಾತು, ಇವಿದೆಯೋ ಅದು ಅಷ್ಟು ಹಗುರವಾಗಿ ಹೇಳುವ ವಿಚಾರವಲ್ಲ. ಫೆಬ್ರವರಿ 21ನೇ ತಾರೀಖಿನಿಂದ ಏಪ್ರಿಲ್ 2ನೇ ತಾರೀಖಿನವರಗೆ ನಡೆದಂಥ ಕಾರ್ಯಕಲಾಪಗಳು ಈ ಸಭೆಯ ಘನತೆಗೆ ತಕ್ಕದ್ದಾಗಿಲ್ಲವೇ ? ಆ ಕೆಲಸಕಾರ್ಯಗಳನ್ನು ಸಭಾಧ್ಯಕ್ಷರು ನಡೆಸಿಲ್ಲವೇ ? ತಮ್ಮ ಒಂದು ನೇತೃತ್ವದಲ್ಲಿ ಮತ್ತು ತಮ್ಮ ಒಂದು ಮುಂದಾಳುತ್ವದಲ್ಲಿ ಈ ಸಭೆಯ ಕಾರ್ಯಕಲಾಪಗಳನ್ನು ಯಾರೇ ಸದಸ್ಯರಾಗಲೀ ಟೀಕೆ ಮಾಡುವುದು ಈ ಸಭೆಯ ಘನತೆಗೆ ತಕ್ಕದ್ದೇ ಎಂಬುದು ಈಗ ಈ ಸಭೆಯ ಮುಂದಿದೆ. ಮಾನ್ಯ ಮಿತ್ರರಾದಂಥ ಶ್ರೀ ದೊಡ್ಡಬೋರೇಗೌಡರು ಮಾತನಾಡುವಾಗ ಅವರಿಗೆ ತಿಳಿದ ರೀತಿಯಲ್ಲಿ, ಬಹಳ ದುಃಖಪಟ್ಟವರಾಗಿ ಈ ಸಭೆಯನ್ನು ಅವಹೇಳನ ಮಾಡುವ ರೀತಿಯಲ್ಲಿ ಮಾತನಾಡಿದ್ದು ನೋಡಿದರೆ ಅದು ಯಾವ ಈ ಸಭಾಸದಸ್ಯರಿಗೂ ಯೋಗ್ಯವಾದುದಲ್ಲ. ಈ ಸಭೆಯ ಘನತೆ, ಗೌರವಗಳನ್ನು ಎತ್ತಿ ಹಿಡಿಯುವುದರಲ್ಲಿ ಇತ್ತಕಡೆಯ ಸದಸ್ಯರೂ ಸಹ ನಿಜವಾಗಿ ಅರ್ಹರು ಎಂಬುದಾಗಿ ಹೇಳುತ್ತೇನೆ. ಈ ಸಭೆಯಲ್ಲಿ ಧರಣೀ ಸತ್ಯಾಗ್ರಹ ಮಾಡುವ ಮಟ್ಟಕ್ಕೆ ಹೋಗಿ ಈ ಪ್ರಜಾಪ್ರಭುತ್ವದಲ್ಲಿ ಈ ಸಭೆಯ ಗೌರವವನ್ನು ಎತ್ತಿ ಹಿಡಿದಿದ್ದೇವೆ. ಇಡೀ ರಾಷ್ಟ್ರವೇ ಹೊಗಳು ವಂತಹ ರೀತಿಯಲ್ಲಿ ಈ ಸಭೆ ತನ್ನ ಕಾರ್ಯಗಳನ್ನು ಮಾಡಿದೆ. ಇಂಥಾ ಕಾಲದಲ್ಲಿ ನಾವು ಚರ್ಚೆ ಮಾಡಿ ಈ ಸಭೆಯ ಕಾಲವನ್ನು ವ್ಯರ್ಥ ಮಾಡಿದ್ದೇವೆ ಎನ್ನುವ ಮಾತನ್ನು ಹೇಳತಕ್ಕದ್ದು ಈ ಸಭೆಯ ಘನತೆಗೆ

ತಕ್ಕ ಮಾತಲ್ಲ. ಈ ಸಭೆಯ ಸದಸ್ಯರಾಗಿ ಅದು ಹೇಳತಕ್ಕ ಮಾತಲ್ಲ. ಅವರು ಹೇಳಿದಂತಹ ಮಾತು ಈ ಸಭೆಯನ್ನು ಅವಹೇಳನ ಮಾಡಿದಂತಾಗುತ್ತದೆ. ಈ ಸಭೆಯ ಕಾಲವನ್ನು ನಾವು ವ್ಯರ್ಥ ಮಾಡಿದ್ದೇವೆ ಎಂದು ಹೇಳಿದಂತಹ ಮಾತನ್ನು ನಾವು ಸಹಿಸುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಈ ಸಭೆ ಮಾಡಿದಂತಹ ಕಾರ್ಯವನ್ನು ಪ್ರಶ್ನೆ ಮಾಡಿದ್ದಾರೆ. ಇದು ಸರಿಯಲ್ಲ. ಈ ಸಭೆ ಬಹಳ ಜವಾಬ್ದಾರಿಯಿಂದ ತನ್ನ ಪವಿತ್ರವಾದ ಕರ್ತವ್ಯವನ್ನು ನಿರ್ವಹಿಸಿದೆ ಎಂದು ನಾನು ಹೇಳುತ್ತೇನೆ. ಈ ದೃಷ್ಟಿಯಿಂದ ನನ್ನ ಮಿತ್ರರಾದ ಶ್ರೀಮಾನ್ ದೊಡ್ಡಬೋರೇಗೌಡರು ಹೇಳಿದಂತಹ ಮಾತು ಸರಿಯಲ್ಲ.

Sri H. N. NANJE GOWDA.—I rise to a point of order.

Sri D. M. SIDDAIAH (Biligere).—I rise to a point of order.

Mr. SPEAKER.—The hon. Member Sri Siddaiah wants to raise a point of order.

Sri H. N. NANJE GOWDA —I stood up earlier, Sir, holding the book in my hand.

Mr. SPEAKER.—Allright. The member may state his point of order. Afterwards, I will allow Sri Siddaiah also to raise his piont of order.

Sri H. N. NANJE GOWDA.—I listened very carefully to my friend Sri Doddaboregowda. He did not observe rule 283. He spoke everything against this rule. Therefore, I request you under rule 315 to expunge all that he spoke because it was defamatory to this House and also defamatory to the Chair.

Mr. SPEAKER.—I have already provided one day to have an educative debate upon the law of privileges. The tests to be applied to determine breach of privileges may be discussed in that educative debate. This subject also can come up then. I do not want to come to a hasty conclusion on this point. I shall consider this point after hearing all the hon. members.

Sri H. N. NANJE GOWDA.—Till then can I go on accusing the Chair and can the Members go on casting aspersions ?

Mr. SPEAKER.—I may state that in order to determine whether it amounts to contempt or not, the word should be there on record. If it is not there the members cannot take notice of it.

Sri D. B. KALMANKAR.—Are you reserving your ruling ?

Mr. SPEAKER.—After hearing the educative debate I shall take a decision.

Sri H. N. NANJE GOWDA.—You said just now that you have reserved your ruling.

Mr. SPEAKER.—I am not going to permit any more discussion. I shall consider the matter after the educative debate.

Sri H. N. NANJE GOWDA.—I want some clarification from the Chair. After hearing the educative debate, if the Chair is to give the ruling, until then can we talk as we like accusing the Chair and the House ?

Mr. SPEAKER.—Nobody can accuse the Chair.

† ಶ್ರೀ ಡಿ. ಎಂ. ಸಿದ್ದಯ್ಯ.—ತಮಗೆ ನಾನು ಬಹಳ ವಿನಯಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುತ್ತೇನೆ. ಏನೋ ಅನಿವಾರ್ಯ ಘಟನೆ ನಡೆಯಿತು. ಆ ಕಡೆಯ ಸದಸ್ಯರೂ ಉದ್ವೇಗಗೊಂಡರು. ಈ ಕಡೆಯ ಸದಸ್ಯರೂ ಉದ್ವೇಗಗೊಂಡರು. ಆಗ ಶ್ರೀ ಚೆನ್ನಯ್ಯನವರು ಎದ್ದು ಸಮಾಧಾನದ ಮಾತುಗಳನ್ನಾಡಿದರು. ಆಗ ಎಲ್ಲಾ ಮುಗಿದು ಪರಿಸಮಾಪ್ತಿಯಾಗಿ ರೂಲ್ಸ್ ಪ್ರಕಾರ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗಿತ್ತು. ಅಷ್ಟು ಹೊತ್ತಿಗೆ ಶ್ರೀ ದೊಡ್ಡಬೋರೇಗೌಡರು ಎದ್ದು ಸಭೆಯ ಕಾಲವನ್ನು ಸದಸ್ಯರು ವೃಥಾ ವ್ಯಯಮಾಡುತ್ತಿದ್ದಾರೆ ಮತ್ತು ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆಂದು ಹೇಳಿದರು. ಆಮೇಲೆ ಮಾನ್ಯ ಶಿವಪ್ಪನವರೂ ಭಾಷಣ ಮಾಡಿದರು; ಶ್ರೀ ನಂಜೇಗೌಡರೂ ಭಾಷಣ ಮಾಡಿದರು. ಡೆಪ್ಯೂಟಿ ಮಿನಿಸ್ಟರಿಗೆ ಸ್ಟೇಟುಮೆಂಟ್ ಮಾಡಲು ಅವಕಾಶ ಕೊಟ್ಟಿದ್ದ ಪಕ್ಷದಲ್ಲಿ, ಇದೊಂದೂ ಕೂಡ ಉದ್ಭವಿಸುತ್ತಾ ಇರಲಿಲ್ಲ. ನಾನು ವಿಜ್ಞಾಪಿಕೊಳ್ಳುವುದು, ಒಬ್ಬ ಸದಸ್ಯರು ಇನ್ನೊಬ್ಬ ಸದಸ್ಯರಿಗೆ ಆ ರೀತಿ ಹೇಳುವುದು ಉಚಿತವಲ್ಲ. ನಾವು, ಯಾವ ಪಕ್ಷದವರೇ ಆಗಿರಲಿ, ಈ ಸಭೆಯ ಘನತೆ ಗೌರವವನ್ನು ಕಾಪಾಡಲಿಕ್ಕೆ ಬಂದಿರುವುದು. ಯಾವ ಪಕ್ಷವೇ ಆಡಳಿತದಲ್ಲಿರಲಿ, ಯಾರು ತಪ್ಪು ಮಾಡಿದರೂ ಅದು ತಪ್ಪೇ ಆಗುತ್ತದೆ. ಈ ಸಭೆಯ ಘನತೆ ಗೌರವವನ್ನು ಎತ್ತಿ ಹಿಡಿಯುವುದು ಎಲ್ಲರ ಕರ್ತವ್ಯ. ಈಗ ಉಪಮಂತ್ರಿಗಳಿಗೆ ಸ್ಟೇಟ್‌ಮೆಂಟ್ ಮಾಡಲು ಹೇಳಿ, ಅದಲ್ಲದೆ ಸುಮ್ಮನೆ ಕೂತುಕೊಂಡು ಕಾರ್ಯಕಲಾಪಗಳು ಈ ರೀತಿ ನಡೆಯುತ್ತಾ ಇದ್ದರೆ, ಯಾವ ರೀತಿ ನಡೆಯುತ್ತಾ ಇವೆ ಎನ್ನುವುದು ಅರ್ಥವಾಗುವುದಿಲ್ಲ. ತಮ್ಮಲ್ಲಿ ಕೃತಜ್ಞತೆಯಿಂದ ವಿಜ್ಞಾಪಿಸಿಕೊಳ್ಳುವುದು ಇಷ್ಟೆ.

Sir, you are the custodian of the rights and privileges and the dignity and decorum of this House. Further I would request the Chair kindly to see that the Deputy Minister is allowed to make his statement if he is ready. If he is not ready or if he wants some more information or if you feel that the Minister for Education should come, you may summon him and ask him to make the statement. You are the person who has been endowed with the task of upholding the entire prestige and honour of this House. Therefore I appeal to you to see that procedure is followed so that we can conduct our business in a dignified and becoming manner.

Mr. SPEAKER.—I appreciate the sentiments of the hon. Member very much.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ವೃಥಾ ಚರ್ಚೆಯನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಅಪೇಕ್ಷೆಪಡುವುದಿಲ್ಲ. ತಮ್ಮಲ್ಲಿ ಒಂದೇ ವಿಜ್ಞಾಪನೆ ಮಾಡಿಕೊಳ್ಳುವುದು. ಮಾನ್ಯಸದಸ್ಯರಾದಂತಹ ದೊಡ್ಡಬೋರೇಗೌಡರು ಮಾಡಿದ ಭಾಷಣದಲ್ಲಿ ಯಾವ ಅನ್‌ಪಾರ್ಲಿಮೆಂಟರಿ ಪದವಾಗಲೀ ಇನ್‌ಡೀಸೆಂಟ್ ಶಬ್ದವಾಗಲಿ ಅಥವ ಸಭೆಯ ಗೌರವಕ್ಕೆ ಮತ್ತು ಘನತೆಗೆ ಧಕ್ಕೆ ತರತಕ್ಕ ಪದವಾಗಲೀ ಇರಲಿಲ್ಲ. ಆದರೆ ಮಾನ್ಯ ಸದಸ್ಯರಾದಂತಹ ಶ್ರೀ ಸಿದ್ದಯ್ಯನವರು ಹೇಳಿದಂತೆ ತಾವು ವಿದ್ಯಾ ಇಲಾಖೆಯ ಉಪಸಚಿವರನ್ನು ಹೇಳಿಕೆ ಕೊಡುವುದಕ್ಕೆ ಕರೆದ ಮೇಲೆ ಅದು "ಆನ್ ಮೋಸ್ಟು ವ್ಯಾಕ್ಯುಂ". ವ್ಯಾಕ್ಯುಂನಲ್ಲಿ ಏನು ಪಾಯಿಂಟ್ ಆಫ್ ಆರ್ಡರ್ ಬರುತ್ತದೆ? ಎಲ್ಲಾ ಮುಗಿದ ಮೇಲೆ ಬಂದಂಥ ಪಾಯಿಂಟ್ ಆಫ್ ಆರ್ಡರ್ ಮೇಲೆ ಹಿಂದೆ ಮುಗಿದಂತಹ ಅಧ್ಯಾಯ ಹೊಸದಾಗಿ ಪ್ರಾರಂಭವಾಯಿತು. ಆ ಕಾರಣದಿಂದ ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶವಿಲ್ಲ. ಮಾನ್ಯ ದೊಡ್ಡಬೋರೇಗೌಡರಿಗೂ ಕೂಡ ಭಾಷಣ ಮಾಡುವುದಕ್ಕೆ ಅವಕಾಶ ಕೊಡಬೇಕಾಗಿರಲಿಲ್ಲ. ಅವರು ಮಾತನಾಡಿದ್ದರಲ್ಲಿ ರೂಲ್ಸ್ 315ರ ಪ್ರಕಾರ ಕ್ರಮ ತೆಗೆದುಕೊಳ್ಳತಕ್ಕಂತಹ ಪದಗಳು ಇವೆ ಎನ್ನುವುದನ್ನೂ ನಾವು ಒಪ್ಪುವುದಿಲ್ಲ.

Sri S. SIVAPPA.—Sir, you definitely promised that after the Hon. Minister Sri Puttaswamy you will ask the Deputy Minister for Education to reply.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನನಗೆ ಎರಡು ನಿಮಿಷ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು.

Sri H. N. NANJE GOWDA.—Sir, Doddabore Gowda said that we are wasting the time of the House, including the Chair. Those words have not been expunged.

Mr. SPEAKER.—I have reserved my ruling.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಶ್ರೀ ದೊಡ್ಡಬೋರೇಗೌಡರು..............

Mr. SPEAKER.—I request the hon. Member to resume his seat.

ಶ್ರೀ ವಾಟಾಳ್ ನಾಗಾರಾಜ್.—ಇಲ್ಲ, ತಾವು ನನಗೆ ಮಾತನಾಡಲು ಅವಕಾಶ ಕೊಡಲೇ ಬೇಕು. ತಾವು ಕುಳಿತುಕೊಂಡರೆ ನಾನು ಎರಡು ನಿಮಿಷದಲ್ಲಿ ಹೇಳಿ ಮುಗಿಸುತ್ತೇನೆ.

Mr. SPEAKER.—I direct the hon. Member Sri Nagaraj to withdraw from the House under Rule 308.

ಶ್ರೀ ವಾಟಾಳ್ ನಾಗರಾಜ್.—ಏಕೆ ಸ್ವಾಮಿ, ನಾನು ತಮ್ಮ ಬಗ್ಗೆ ಅಗೌರವದಿಂದೇನೂ ನಡೆದುಕೊಂಡಿಲ್ಲ.

Mr. SPEAKER.—I direct the hon. Member to withdraw. The member may please get out.

ಶ್ರೀ ವಾಟಾಳ್ ನಾಗರಾಜ್.—ಏಕೆ ಗೆಟ್ ಔಟ್ ಎಂದು ಹೇಳುತ್ತೀರಿ? ಏನು ತಪ್ಪು ಮಾಡಿದ್ದೇನೆ. ನಾನು ಹೋಗುವುದಿಲ್ಲ.

Mr. SPEAKER.—I direct the member to withdraw. Please withdraw.

ಶ್ರೀ ಎಸ್. ಶಿವಪ್ಪ.—ತಾವು ಕೋಪದಲ್ಲಿ ಮಾತನಾಡಿದರೆ ಅದು ಒಳ್ಳೆಯದಾಗುವುದಿಲ್ಲ, ತಾವು ಕೋಪ ಮಾಡಿಕೊಳ್ಳಬಾರದು.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಸ್ವಾಮೀ, ತಾವು ಕೊಟ್ಟ ರೂಲಿಂಗು ಏನಾಯಿತು? ಅಧ್ಯಕ್ಷರ ಸೂಚನೆಯಂತೆ ಅವರು ವಿತ್ ಡ್ರಾ ಮಾಡಬೇಕಾಗುತ್ತದೆ ಅಲ್ಲವೆ?

Mr. SPEAKER.—I request the hon. Leader of the Opposition to ask Sri Nagaraj to obey the Chair. I have ordered him to withdraw under Rule 308.

Sri S. SIVAPPA.—He will do it. ನಾನಾಗಲೇ ತಮಗೆ ಸೂಚನೆ ಕೊಟ್ಟೆ. ತಾವು ಮಾತಾಡುವಾಗ ಸ್ವಲ್ಪ ಸಹನೆಯಿಂದ ಹೇಳಿದರೆ ಸರಿಯಾಗಿರುತ್ತದೆ. ಸ್ವಲ್ಪ ತಾವು ಹೇಳುವ ಟೋನು ಕೆಲವರಿಗೆ ಸರಿಯಾಗಿ ಕಾಣುತ್ತಿಲ್ಲ. ಇದಕ್ಕಾಗಿ ತಮ್ಮಲ್ಲಿ ಆಗಲೇ ಪ್ರಾರ್ಥನೆ ಮಾಡಿಕೊಂಡೆ.

ಶ್ರೀ ಎಸ್. ಚನ್ನಯ್ಯ.—ಸ್ವಾಮೀ, ತಾವು ಹೊರಗೆ ಹೋಗಬೇಕು ಎಂದು ರೂಲಿಂಗು ಕೊಟ್ಟಿದ್ದೀರಿ. ಅದರ ಬಗ್ಗೆ ಹೇಳುತ್ತಿಲ್ಲ. ಆದರೆ ತಾವು ರೂಲಿಂಗು ಕೊಡುವಾಗ ಗೆಟ್ ಔಟ್ ಎಂದು ಮಾನ್ಯ ಸದಸ್ಯರಿಗೆ ಹೇಳುವುದು ತಪ್ಪು. ದಯವಿಟ್ಟು ತಾವು ಹೇಳಿರುವ ಗೆಟ್ ಔಟ್ ಎನ್ನುವ ಶಬ್ದಗಳನ್ನು ವಾಪಸು ತೆಗೆದುಕೊಂಡರೆ ಒಳ್ಳೆಯದು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

Mr. SPEAKER.—I used the word 'get out' in the sense of withdraw. ವಿತ್ ಡ್ರಾ ಎನ್ನುವ ಅರ್ಥದಲ್ಲಿ ಇದನ್ನು ಹೇಳಿದ್ದೇನೇ ವಿನಾ ಬೇರೆ ಯಾವ ಅರ್ಥದಲ್ಲೂ ನಾನು ಹೇಳಲಿಲ್ಲ.

Sri K. PUTTASWAMY.—Sir, may I make a humble submission? In order to maintain the dignity of the House, I would very much like Sri Vatal Nagaraj to obey the direction of the Chair.

Mr. SPEAKER.—I request the hon. Leader of the Opposition to ask Sri Nagaraj to withdraw.

Sri S. SIVAPPA.—I will request him to withdraw for a few minutes and come back. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದು ನಿಮ್ಮ ಮನೋಭಾವನೆ ಒಳಗೆ ಸರಿಯಾಗಿದ್ದರೂ ಇಲ್ಲಿ ಸೂಚನೆ ಕೊಡುವಾಗ ತಾವು ಉಪಯೋಗಿಸುವ ಶಬ್ದ, ಎಂದರೆ ಗೆಟ್ ಔಟ್ ಎಂದು ಹೇಳುವುದು, ಅಷ್ಟು ಒಳ್ಳೆಯ ಶಬ್ದವಲ್ಲ.

ಅಧ್ಯಕ್ಷರು.—ನಾನು ವಿತ್ ಡ್ರಾ ಎನ್ನುವ ಅರ್ಥದಲ್ಲಿ ಮಾತ್ರ ಹೇಳಿದ್ದು. ಬೇರೆ ಏನಿಲ್ಲ. It is only in that sense I used it.

Sri H. N. NANJE GOWDA.—Sri Doddabore Gowda made a remark that we, on this side including the Chair are wasting the time of the House. That point of Order was brought to the notice of the House under Rule 315. The Chair did not agree to it. Now how can the Chair take power under Rule 308 ? Therefore, Sri Nagaraj need not go out of this House.

Mr. SPEAKER.—I have directed him to withdraw and he has to obey. I have reserved my Ruling with regard to Sri Doddabore Gowda's remarks, whether it is parliamentary or not.

Sri H. N. NANJE GOWDA.—I did not say that it was unparliamentary.

Mr. SPEAKER.—I shall take a decision only after hearing the debate on Privileges, not till then.

Sri H. N. NANJE GOWDA.—I wanted those words to be expunged, because it was a reflection on the business of the House. I never said that it was unparliamentary. The Chair did not agree to that. The Chair cannot give direction under Rule 308. Therefore, I say that Sri Vatal Nagaraj need not go out of the House.

Mr. SPEAKER.—As hon. Member Sri Vatal Nagaraj has not withdrawn from the House and in order to enable his friends to persuade him to withdraw from the House, I adjourn the House for half-an-hour.

The House adjourned at Thirty Minutes past Three of the Clock and reassembled again at Twenty Minutes past Four of the Clock.

[MR. SPEAKER in the Chair]

Sri M. S. KRISHNAN.—Sir, I have a point of order......

Mr. SPEAKER.—The hon. Member cannot raise a point of order now because under rule 311, a point of order be raised only with respect to business on hand, or with respect to arrangement of business or keeping of order in the House.

Sri M. S. KRISHNAN.—I am glad you have drawn my attention to this. Sub-rule (2) says that a point of order may be raised in relation to the business of the Assembly. The business that had been taken up

before you adjourned the House has not yet reached a finality and it is still on the anvil.

Mr. SPEAKER.—I have not called any particular item of business.

Sri M. S. KRISHNAN.—There was already some subject before we adjourned. You were pleased to adjourn the House when several points of orders were raised, without giving any ruling. Sri H. N. Nanjegowda had raised point of order. Sri Doddabore Gowda had made some statement. The situation of this House was, you as Speaker made certain remarks and ordered that Sri VATAL NAGARAJ should withdraw. Later on, in a fit of passion and anger, you asked him to get out. We pointed out that the expression 'get out' was not proper and with all due respect, you were pleased to say, that the expression was used in a particular sense, in the sense that SRI VATAL NAGARAJ should withdraw. My point of order is whether it is enough if the Speaker says that it was used in a particular sense. I was just looking into the Parliamentary Procedure by M. N. Kaul: You will pardon me if I read what the late Prime Minister Sri JAWAHARLAL NEHRU spoke about the Speaker:

Speaking on March 8, 1958 on the occasion of the unveiling of the portrait of Sardar Patel, Prime Minister Jawaharlal Nehru observed:

> "The Speaker represents the House. He represents the dignity of the House, the freedom of the House and because the House represents the nation, in a particular way, the Speaker becomes the symbol of the nation's freedom and liberty. Therefore, it is right that, that should be an honoured position, a free position and should be occupied always by men of outstanding ability and impartiality."
>
> (Extract from Practice and Procedure of Parliament by M. N. Kaul—S. L. Shakdar—P. 93)

What he has said there, is on all fours applicable to the Hon. Speaker here, because we consider you as the repository of all the privileges and dignity of the House. We look up to you to protect the interests of both the sides. You should protect the interests of all sides of the House. What the late Panditji said applies to you also. Now what has happened is, in respect of the word used, it is not enough if you say that this word was used in a particular sense. I will read an extract from page 823 of Lok Sabha Debates 30-11-1955

(Page 823-824—Practice and Procedure of Parliament by M. N. Kaul—S. L. Shakdar)

> " A member or a Minister may invite the Speaker's attention at the time, when the defamatory or indecent or unparliamentary or undignified words are used, or subsequently, and if the Speaker agrees, he may order their expunction "

(SRI M. S. KRISHNAN)

> "On the attention of the Speaker being drawn to objectionable words by an officer of the Secretariat or otherwise, the Speaker may order the expunction of such words.

The words used in the course of the speech in the House may be changed.

> "The word 'Dogla' used with reference to some members was objected to, as being vulgar. The member who used the word explained that the meaning intended by him was 'with two voices' and not 'illegitimate'. Thereupon the Speaker directed the deletion of the word 'Dogla' and the use of the word 'Domukh' in substitution therefor which brought out the Member's meaning clearly."

So you have got a right to change it. You did not mean that Sri VATAL NAGARAJ should get out. You meant that he should withdraw from the House.

In the same way, the word 'DOGRA' which was used by some Member was considered to be vulgar and illegitimate. The Speaker directed the deletion of the word 'DOGRA'. I would like to refer to this particular position as it happened in LOK SABHA Debate of 30th November 1955. This word was substituted as directed by the Hon'ble Speaker. I request you to kindly consider this precedent and substitute the word *withdraw* for the expression "get out".

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಈಗ ವಾಟಾಳ್ ನಾಗರಾಜ್‌ರವರು ವಿತಡ್ರಾ ಮಾಡಬೇಕು ಎಂದು ತಾವು ಹೇಳುವಾಗ ಉದ್ವೇಗದಲ್ಲೋ ಅಥವಾ ರಭಸದಲ್ಲೋ ಗೊತ್ತಾಗಲಿಲ್ಲ "get out" ಎಂಬ ಶಬ್ದವನ್ನು ಉಪಯೋಗಿಸಿದ್ದೀರಿ. ಬಹಳ ಉದ್ವೇಗದಲ್ಲಿ ಹೇಳಿರಬಹುದು. ತಾವು ಶಾಂತರೀತಿಯಲ್ಲಿ ದಯೆಯಿಟ್ಟು ಯೋಚನೆ ಮಾಡಬೇಕು. ಕೋಪದಲ್ಲೋ ಏನೋ ಆ ಶಬ್ದವನ್ನು ಉಪಯೋಗಿಸಿರಬಹುದು. "ಗೆಟ್ ಔಟ್" ಎಂಬ ಶಬ್ದ ಅನ್‌ಪಾರ್ಲಿಮೆಂಟರಿ ಅರ್ಥ ಕೊಡುವುದರಿಂದ ಅದಕ್ಕೆ ಬದಲಾಗಿ 'ವಿತಡ್ರಾ' ಎಂಬ ಶಬ್ದವನ್ನು ಹೇಳುವುದು ಒಳ್ಳೆಯದು. ಅಧ್ಯಕ್ಷ ಪೀಠದ ಬಗ್ಗೆ, ಅಧ್ಯಕ್ಷರ ಬಗ್ಗೆ ನಮಗೆ ವಿಶೇಷ ಗೌರವವಿದೆ, ನಾವೂ ಕೂಡ ಈಗ ನಡೆದಿರುವ ಕಾರ್ಯಕಲಾಪದಲ್ಲಿ ಭಾಗಿಯಾಗಿದ್ದೇವೆ. ಬ್ರೈಸ್ಲಿಪ್ ಆಫ್ ಟಂಗ್ ಅಥವ ಕೋಪದಲ್ಲಿ ಆ ಶಬ್ದ ತಮ್ಮ ಬಾಯಿಂದ ಬಂದಿರಬಹುದು. ಆದುದರಿಂದ ತಮ್ಮ ಗೌರವಕ್ಕನುಗುಣವಾಗಿ ತಾವು ಹೇಳಿರುವ ಅರ್ಥ ಬದಲಾಯಿಸಿಕೊಳ್ಳಲು ಬೇರೆ ಮಾತನ್ನು ಉಪಯೋಗಮಾಡಿ 'ವಿತಡ್ರಾ' ಎಂಬ ಮಾತನ್ನು ಹೇಳಿ ಈ ಸಭೆಯ ಘನತೆಯನ್ನು ಕಾಪಾಡಬೇಕು ಎಂದು ಸೂಚಿಸುತ್ತೇನೆ.

4-30 P.M.

